

# ಮಾಯಾ ಕನ್ನಡಿ

ಒಂದೂರಿನ ರಾಜನೊಬ್ಬ ಮದುವೆಯಾಗಲು ನಿರ್ಧರಿಸಿದ. ಆತ ಈ ವಿಷಯವನ್ನು ಮೊದಲಿಗೆ ತನ್ನ ಕ್ಷೌರಿಕನಿಗೆ ತಿಳಿಸಿದ, ಬಳಿಕ ತನ್ನ ದೇಶದ ಅತ್ಯಂತ ವೃದ್ಧೆಗೆ ತಿಳಿಸಿದ. ನಂತರ ರಾತ್ರಿ ಕಾವಲುಗಾರನಿಗೆ ತಿಳಿಸಿದ. ಈ ಸುದ್ದಿ ರಾಜ್ಯದಲ್ಲೆಲ್ಲಾ ಹಬ್ಬಲು ಹೆಚ್ಚು ಕಾಲ ಬೇಕಾಗಲಿಲ್ಲ. ಕ್ಷೌರಿಕ ತನ್ನಲ್ಲಿಗೆ ಬಂದ ಗ್ರಾಹಕರಿಗೆಲ್ಲ ಈ ವಿಷಯ ಅರುಹಿದ. ಗ್ರಾಹಕರು ತಮ್ಮ ಪರಿಚಯಸ್ಥರಿಗೆ ಹೇಳಿದರು. ರಾತ್ರಿ ಕಾವಲುಗಾರ ದೊಡ್ಡ ಧ್ವನಿಯಲ್ಲಿ ಈ ಸುದ್ದಿಯನ್ನು ಘೋಷಿಸಿದ. ವೃದ್ಧೆ ಪ್ರತಿಯೊಬ್ಬ ಯುವತಿಗೂ ರಾಜ ಮದುವೆಯಾಗುವ ವಿಷಯ ತಿಳಿಸಿ ಅವರು ತಯಾರಾಗಿರುವಂತೆ ಹೇಳಿದಳು.

ಕ್ಷೌರಿಕನಲ್ಲಿ ರಾಜ ತುಂಬಾ ವಿಶ್ವಾಸವಿರಿಸಿದ್ದಾನೆ ಎಂದು ಅರಿತಿದ್ದ ಮುದುಕಿ 'ರಾಜ ತನ್ನ ಪತ್ನಿಯನ್ನು ಹೇಗೆ ಆಯ್ಕೆ ಮಾಡುತ್ತಾನೆ' ಎಂಬುದಾಗಿ ಕ್ಷೌರಿಕನಲ್ಲಿ ಪ್ರಶ್ನಿಸಿದಳು.

'ರಾಜನಿಗೆ ಅನುರೂಪಳಾದ ಹುಡುಗಿಯನ್ನು ಆಯ್ಕೆ ಮಾಡಬೇಕಾದರೆ ನನಗೆ ತುಂಬಾ ಕಷ್ಟವಿದೆ' ಎಂದು ಕ್ಷೌರಿಕ ಉತ್ತರಿಸಿದ.

ಮುದುಕಿ ಅಚ್ಚರಿಗೆ ಬಿದ್ದಳು. 'ನೀನು! ನಿನಗೇನು ಪಾತ್ರ ಇದರಲ್ಲಿ' ಎಂದು ಅವಳು ಪ್ರಶ್ನಿಸಿದಳು.

'ರಾಜನ ಮುಖ ಮುಟ್ಟುವ ಅಧಿಕಾರ ಇರುವುದು ನನಗೆ ಮಾತ್ರ ಎಂಬುದು ಮರೆತುಬಿಟ್ಟೆಯಾ?' ಎಂದ ಕ್ಷೌರಿಕ ಮುಂದುವರಿಸಿ 'ನನ್ನಲ್ಲಿ ಒಂದು ಮಾಯಾ ಕನ್ನಡಿಯಿದೆ. ಯಾವುದೇ ಹುಡುಗಿ ಅದರಲ್ಲಿ ತನ್ನ ಮುಖ ನೋಡಿದಾಗ ಆಕೆಯ ಚಾರಿತ್ರ್ಯದಲ್ಲೇನಾದರೂ ಹುಳುಕಿದ್ದರೆ ಕನ್ನಡಿಯಲ್ಲಿ ಆಕೆಯ ಮುಖದಲ್ಲಿ ಕಲೆಗಳು ಮೂಡುತ್ತವೆ. ರಾಜನನ್ನು ಮದುವೆಯಾಗಲು ಬಯಸುವ ಹುಡುಗಿ ಮೊದಲಿಗೆ ಈ ಕನ್ನಡಿಯ ಮುಂದೆ ನಿಂತುಕೊಳ್ಳಬೇಕು. ಯಾವುದೇ ಕಲೆ ಮೂಡದ ಹುಡುಗಿಯನ್ನು ರಾಜ ಮದುವೆಯಾಗುತ್ತಾನೆ' ಎಂದ.

'ಮದುವೆಯಾಗಲು ಇದು ಕೂಡ ಒಂದು ಷರತ್ತೆ ?' ಎಂದಳು ಮುದುಕಿ.

'ಇದೊಂದೇ ಷರತ್ತು. ಬೇರೇನಿಲ್ಲ. 18ಕ್ಕಿಂತ ಮೇಲಿನ ಯಾವುದೇ ಹುಡುಗಿ